ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಮತ್ತು ಅರ್ಜಿಯಲ್ಲಿ ಬರೆಸಿರುವ ಅಂಶಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಅಪಘಾತ ದಿನಾಂಕ 12.03.2022ರಂದು ಆಗಿರುತ್ತದೆ. ದೂರನ್ನು ನನ್ನ ಹೆಂಡತಿಯ ಅಣ್ಣ ನೀಡಿರುತ್ತಾರೆ. ನಾನೇ ಹೋಗಿ ದೂರು ನೀಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಪೆಟ್ಟಾಗಿದ್ದ ಕಾರಣ ನಾನೇ ಹೋಗಿ ದೂರು ನೀಡಲಿಲ್ಲ ಎಂದು ನುಡಿಯುತ್ತಾರೆ.

ಅಪಘಾತಪಡಿಸಿದ ವಾಹನದ ಸಂಖ್ಯೆ 5252. ವಾಹನು ಕೆಂಪು ಬಣ್ಣದ ಮಾರುತಿ ಸುಜಿಕಿ ಆಗಿತ್ತು. ನಾನು ರಸ್ತೆ ನಿಯಮವನ್ನು ಸರಿಯಾಗಿ ಪಾಲಿಸದೇ ಫೋನಿನಲ್ಲಿ ಮಾತನಾಡಿಕೊಂಡು ಹೋಗುತ್ತಿದ್ದ ಕಾರಣ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ವಾಹನ ಚಾಲನೆ ಮಾಡುತ್ತಿದ್ದಾಗ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ದೊಮ್ಮರ ದೊಡ್ಡಿ ಬಳಿ ಆಗಿದೆ. ಅಪಘಾತಪಡಿಸಿದವರೇ ನನ್ನನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಹೇಳಲು ಸಾಧ್ಯವಿಲ್ಲ. ಎಂ.ಎಲ್.ಸಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಅಪಘಾತಕ್ಕೂ ಮುನ್ನ ಕಾರ್ಪೆಂಟರ್ ಕೆಲಸ ಮಾಡುತ್ತಿದ್ದೆ, 4 ಹಸು ಇಟ್ಟುಕೊಂಡಿದ್ದೆ ಮತ್ತು ರೇಷ್ಮೆ ಬೆಳೆ ಬೆಳೆಯುತ್ತಿದ್ದೆ. ಈ ಎಲ್ಲಾ ಕೆಲಸಗಳನ್ನು ನನಗೆ ಮಾಡಲು ಆಗುತ್ತಿಲ್ಲ. ನನಗೆ ಅಪಘಾತಕ್ಕೂ ಮುನ್ನ ಈ ಎಲ್ಲಾ ಕೆಲಸಗಳಿಂದ 40 ರಿಂದ 50 ಸಾವಿರ ಆದಾಯ ಬರುತ್ತಿತ್ತು. ನನ್ನ ವರಮಾನದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ.

ಎಂ.ವಿ.ಸಿ ನಂ. 195/2022ರಲ್ಲಿ

ಪಿ.ಡಬ್ಲೂ -1(ಚಂದ್ರಪ್ಪ)

ಅಪಘಾತದಿಂದ ನನ್ನ ತಲೆಗೆ ಮತ್ತು ಕೈಗೆ ಬಲವಾದ ಪೆಟ್ಟು ಬಿದ್ದಿತ್ತು. ಅರ್ಜಿಯಲ್ಲಿ ಬರೆಸಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಖರ್ಚಿನ ವೆಚ್ಚ 50 ಸಾವಿರ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಡಿ.ಎಲ್ ಹಾಜರುಪಡಿಸಿದ್ದೇನೆ. ನನ್ನ ನಿರ್ಲಕ್ಷತನದಿಂದ ಹಿಂಬದಿಯಿಂದ ಗಾಡಿ ಗುದ್ದಿದೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ದೈಹಿಕ ಮತ್ತು ಅರ್ಥಿಕ ನಷ್ಟ ಉಂಟಾಗಿಲ್ಲದೇ ಇದ್ದರೂ ಸಹ ಪರಿಹಾರ ಪಡೆಯಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು